

ಸರ್'.

'ಹಾಗಾದರೆ ಕಾಯಿ ತುರಿದ ಮೇಲೆ ಕರಟ ಡ್ರೈ ಕಸಾನೋ ವೆಟ್ ಕಸಾನೋ?'

'ಅದು ವೆಟ್ ಕಸಕ್ಕೇ ಹಾಕಬೇಕು ಅಂತ ಸೋಮಿ ಅನ್ನಾಳೆ.'

'ಸರಿ ಮತ್ತೆ ಕರಟಾನೇ ವೆಟ್ ಕಸ ಅಂದ ಮೇಲೆ ಇನ್ನು ಕಬ್ಬಿನ ಸಿಪ್ಪೆನೂ ವೆಟ್ ಕಸಾನೇ ಅಲ್ವೇನ್ರೀ?'

'ನನಗೆ ಇದು ಸಮಂಜಸ ಅನಿಸೋದಿಲ್ಲ ಸರ್. ಕರಟದಲ್ಲೂ ಹಸಿಯಾದ ಅಂಶ ಇಲ್ಲ, ಕಬ್ಬಿನ ಸಿಪ್ಪೆನಲ್ಲೂ ಹಸಿಯಾದ ಅಂಶ ಇಲ್ಲ. ಮತ್ತೆ ಅದು ಹ್ಯಾಗೆ ವೆಟ್ ಕಸ ಆಗುತ್ತೆ. ಇವೆರಡೂ ಡ್ರೈ ಕಸವೇ ಸರಿ ಡ್ರೈ ಕಸದ ಬಾಕ್ಸ್‌ಗೇ ಹಾಕಿ'.

'ಅದರೆ ಸೋಮಿ ಇದನ್ನು ಒಪ್ಪೋದಿಲ್ವಲ್ಲ?'

'ನಾನು ಬಂದು ನಿಮ್ಮ ಹೆಂಡ್ತಿನ ಒಪ್ಪಿಸೋದಕ್ಕೆ ಆಗೋದಿಲ್ಲ. ಕಟ್ಟಿಕೊಂಡ ಕರ್ಮಕ್ಕೆ ನೀವೇ ಒಪ್ಪಿಸಬೇಕು. ಇಡ್ರೀ ಫೋನು. ನನಗೆ ಬೇರೆ ಕಾಲ್ ಬರ್ತಿದೆ' ಅಂದು ಅವರೇ ಕರೆಯನ್ನು ನಿಲ್ಲಿಸಿದರು.

ಬಿದ್ರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಸೋಮು ಸೋಮಿ ಬಳಿ ಬಂದು 'ಕಾರ್ಪೊರೇಷನ್ನಿನವರೇ ಹೇಳಿದಾರೆ, ಕಬ್ಬಿನ ಸಿಪ್ಪೆ ಡ್ರೈ ಕಸ ಅಂತೆ' ಅಂದ. ಸೋಮಿ 'ಯಾವೋನ್ರೀ ಹೇಳಿದ್ದು ಕಬ್ಬಿನ ಸಿಪ್ಪೆ, ಕರಟ, ಎಲ್ಲಾ ಹಸಿ ಕಸವೇ. ಯಾಕೆ ಗೊತ್ತೇನ್ರೀ ಅದರಿಂದ ಹಸಿಹಸಿಯಾದ ರಸ, ತುರಿ ಹೊರಬಂದಿರುತ್ತೆ ಅದಕ್ಕೆ' ಅಂದು ನಕ್ಕಳು.

'ಹಾಗಾದರೆ ಕೊಬ್ಬರಿ. ಅದರಿಂದ ಹಸಿ ತುರಿ ಬರಲ್ವಲ್ಲ. ಕೊಬ್ಬರಿಯನ್ನು ಯಾರಾದರೂ ಕಸದ ಡಬ್ಬಕ್ಕೆ ಹಾಕ್ತಾರೇನ್ರೀ. ಹೋಗ್ರೀ ಹೋಗ್ರೀ ಕೆಲಸ ನೋಡ್ರೀ' ಅಂದು ಒಳಗೆ ಹೋದಳು.

ಸೋಮುಗೆ ಗೊಂದಲ ಇನ್ನೂ ಹೆಚ್ಚಾಯಿತು. 'ಇನ್ನೊಂದೆರಡು ಕಡೆ ವಿಚಾರಿಸಿಕೊಂಡು ಬರ್ತೀನಿ ಕಣೆ' ಅಂದು ಹೊರಟ. ಒಳಗಿಂದಲೇ ಸೋಮಿ 'ಇನ್ನೊಂದೆರಡು ಕಡೆ ಅಲ್ಲ ಇನ್ನೂ ಹತ್ತು ಹನ್ನೆರಡು ಕಡೆ ವಿಚಾರಿಸಿಕೊಂಡು ಬನ್ನಿ, ಕಡೆಗೆ ನಾನು ಹೇಳಿದ್ದೇ ಸರಿ ಅಂತ ನೀವು ಒಪ್ಪಿಕೊಳ್ಳದೇ ಬೇರೆ ವಿಧಿಯಿಲ್ಲ' ಅಂದಳು.

ಸೋಮು ತನ್ನ ಆಪ್ತ ಗೆಳೆಯ ವಾಸು ಕೇಳಿದ. 'ನಿನ್ನ ಸೋಮಿ ಏನಂತಾಳೆ' ಅಂತ ಕೇಳಿದ ವಾಸು.

'ಅವಳು ಕರಟ, ಕಬ್ಬಿನ ಸಿಪ್ಪೆ ಎರಡೂ ಹಸಿ ಕಸ ಅಂತಾಳೆ'.

'ಸರಿ ಮತ್ತೆ, ಅವರು ಹೇಳಿದ್ದೇ ಸರಿ.'

'ಅದು ಹ್ಯಾಗೋ?'

'ನೋಡು ಸೋಮು ಮದುವೆಯಾದ ಮೇಲೆ ಬರೀ ಕರಟ, ಕಬ್ಬಿನ ಸಿಪ್ಪೆ ಯಾಕೆ, ಇನ್ನು ಯಾವುದ್ಯಾವುದೇ ವಿಚಾರಗಳಲ್ಲಿ ಹೆಂಡ್ತಿ ಏನು ಹೇಳುತ್ತಾಳೋ ಅವುಗಳನ್ನೆಲ್ಲಾ ಸರಿ ಅಂತ ಒಪ್ಪಿಕೊಳ್ಳೋದು ಗಂಡಸರ ಲಕ್ಷಣ. ಅಂದ ಮೇಲೆ ಕಸದ ವಿಚಾರದಲ್ಲಿ ಭಿನ್ನರಾಗ ಯಾಕೆ? ಅವರು ಹೇಳಿದ ಹಾಗೆ ಕೇಳಬೇಕು ಅಂತೀಯಾ, ಕೇಳಿದ್ರೆ ಅದು ಜಾಣತನ, ಬೇರೆ ದಾರಿ ಏನಿದೆ ಹೇಳು?. ಇಲ್ಲದಿದ್ರೆ ನಾವೇ ಕಸವಾಗುವ ಅಪಾಯವಿದೆ. ಅಂದ್ರೆ ನಾವು ವೆಟ್ ಕಸಾನೋ ಡ್ರೈ ಕಸಾನೋ, ನಾವು ಎಡಬಿಡಂಗಿಗಳು, ಇದೂ ಅಲ್ಲ ಅದೂ ಅಲ್ಲ. ಏನೋ ಹೀಗೆ ಮನೆಯವರಿಗೆ ಸರಂಡರ್ ಆಗಿದ್ದೀಯ. ನಾಚಿಕೆಯಾಗೋದಿಲ್ವಾ?'

'ಮದುವೆಯಾದ ಮೇಲೆ ನಾಚಿಕೆ ಬಿಟ್ಟುಬಿಟ್ಟೆ' ಅಂದ ವಾಸು ಸೋಮು ಕಿವಿ ಹತ್ತಿರ ಬಂದು ಮೆತ್ತಗೆ 'ನಾಚಿಕೆ ಬಿಡದೇ ಹೋಗಿದ್ರೆ ಮೂರು ಮಕ್ಕಳು ಹೇಗೋ ಆಗ್ತಿದ್ವು?' ಅಂದು ಕಿಸಕ್ಕನೆ ನಕ್ಕ.

'ಹೋಗಿ ಹೋಗಿ ನಿನ್ನನ್ನು ಕೇಳೋಕೆ ಬಂದ್ನಲ್ಲ, ನನಗೆ ಹೊಡ್ಕೊಬೇಕು' ಅಂದು ಸೋಮು ಮನೆ ಕಡೆ ಹೊರಟ. ವಾಸು ಹಿಂದೆ ಬಂದು 'ಒಂದು ನಿಮಿಷ' ಅಂದು ಸೋಮು ಭುಜದ ಮೇಲೆ ಕೈ ಹಾಕಿದ.

'ನಾವು ಎಲ್ಲೇ ಬದುಕಿದರೂ ಅಂದರೆ ಮನೆಯಲ್ಲೇ ಆಗಲಿ, ಆಫೀಸಿನಲ್ಲೇ ಆಗಲಿ ಕಸ ಅನಿಸಿಕೊಳ್ಳದಂತೆ ಬದುಕಬೇಕು' ಅಂದ.

'ನಾವು ಕಸ ಅನಿಸಿಕೊಳ್ಳೋದಾ, ಹಾಗಂದ್ರೇನೋ?'

'ವೇಸ್ಟ್ ಬಾಡಿ, ಡೆಡ್ ಬಾಡಿ, ಇವನು ಮೂರು ಕಾಸಿಗೆ ಪ್ರಯೋಜನವಿಲ್ಲ ಅಂತಾರಲ್ಲ ಅಂಥವರು ಕಸದ ಲೆಕ್ಕ. ಅದಕ್ಕೇ ಹುಷಾರಾಗಿರಬೇಕು. ಕಸದ ಡೆಫಿನಿಷನ್ ನಮಗೆ ಅಪ್ಲೈ ಆಗದೇ ಇರೋ ಹಾಗೆ ಜಾಣರಾಗಿರಬೇಕು.'

'ಅದೇನದು ಕಸದ ಡೆಫಿನಿಷನ್ ನಮಗೆ ಅಪ್ಲೆ ಆಗದೇ ಇರೋದು ಅಂದ್ರೆ?'

'ನಿನಗೆ ಈ ಜೋಕ್ ಗೊತ್ತಿದೆ ಅಂದ್ಕೊಂಡಿದ್ದೆ. ಈಗ ನೀನು ಜೋಕ್ ಗೊತ್ತಿಲ್ಲದ ಕಸ. ಹೇಳ್ತೀನಿ ಕೇಳು. ಕೈಲಾಸಂ ನಿಂಗೆ ಗೊತ್ತಲ್ಲ, ಅವರ ಮನೆಗೆ ಒಬ್ಬ ಅಮಾಯಕ ಹುಡುಗ ಹೋದ್ನಂತೆ. ಕೈಲಾಸಂ ಮನೇಲಿ ತುಂಬಾ ಕಸ ಅಲ್ಲಲ್ಲಿ ಬಿದ್ದಿತ್ತಂತೆ. ಅದನ್ನು ನೋಡಿದ ಹುಡುಗ 'ಇದೇನ್ಸಾರ್ ಇಲ್ಲಿ ಇಷ್ಟೊಂದು ಕಸ?' ಅಂದ್ನಂತೆ. ಅದಕ್ಕೆ ಕೈಲಾಸಂ ಕಸಕ್ಕೆ ಡೆಫಿನಿಷನ್ ಗೊತ್ತೇನೋ ಮಗು ನಿನಗೆ ಅಂತ ಕೇಳಿದಾಗ ಹುಡುಗ ಗೊತ್ತಿಲ್ಲ ಅಂದ್ನಂತೆ. ಆಗ ಕೈಲಾಸಂ, 'ಕೇಳು ನಾನು ಹೇಳ್ತೀನಿ ಡೆಫಿನಿಷನ್ನು. ಯಾವ ವಸ್ತು ಎಲ್ಲಿ ಇರಬಾರದೋ ಅದು ಅಲ್ಲಿ ಇದ್ರೆ ಅದು ಕಸ, ಉದಾಹರಣೆಗೆ ನೀನು ನನ್ನ ರೂಮಿನಲ್ಲಿರೋದು' ಅಂದ್ರಂತೆ. ಹುಡುಗನಿಗೆ ಅರ್ಥವಾಗಿ ಅಲ್ಲಿಂದ ಜಾಗ ಖಾಲಿ ಮಾಡಿದನಂತೆ. ಅದಕ್ಕೇ ಈ ಡೆಫಿನಿಷನ್ನು ನಮಗೆ ಅಪ್ಲೈ ಆಗದಂತೆ ಬದುಕಬೇಕು. ನಾವು ಎಲ್ಲೇ ಇದ್ರೂ ನಮ್ಮನ್ನು ನೋಡಿದವರು ಇವನೊಬ್ಬ ಕಸ ಅಂದ್ಕೊಬಾರದು'.

ಇಷ್ಟು ಹೇಳಿ ವಾಸು ಜಾಗ ಖಾಲಿ ಮಾಡಿದ. ಸೋಮು ಅವನ ಕಡೆ ನೋಡಿಕೊಂಡು ಏನೋ ಕೇಳಿದರೆ ಇನ್ನೇನೋ ಹೇಳಿ ಹೋಗ್ತಿದಾನೆ ಅಂದ್ಕೊಂಡು ಮನೆ ಕಡೆ ಹೊರಟ. ಈಗ ಸೋಮಿ ಕೇಳಿದರೆ ಏನು ಹೇಳೋದು ಅಂತ ಯೋಚಿಸಿಕೊಂಡೇ ಹೊರಟ. ಮನೆಯ ಬಾಗಿಲು ತೆಗೆದುಕೊಂಡು ಒಳಗೆ ಹೋದಾಗ 'ಅನ್ಯಥಾ ಶರಣಂ ನಾಸ್ತಿ' ಎನ್ನುವ ಮಾತು ಮತ್ತು ಈಗ ತಾನೇ ವಾಸು ಹೇಳಿದ ಮಾತು ಎಲ್ಲವೂ ನೆನಪಾಗಿ ಗಟ್ಟಿಯಾಗಿ 'ಸೋಮಿ ನೀನು ಹೇಳಿದ್ದೇ ಕರಕ್ಟು ಕಣೆ. ಕರಟ ಮತ್ತು ಕಬ್ಬಿನ ಸಿಪ್ಪೆ ಎರಡೂ ವೆಟ್ ಕಸಾನೇ ಅಂತೆ. ವೆಟ್ ಕಸದ ಡಬ್ಬಕ್ಕೇ ಹಾಕಬೇಕಂತೆ' ಅಂದ.

ಸೋಮಿ ಖುಷಿಯಾಗಿ ಒಳಗಿಂದ ಬಂದು ನಿಮಗೆ ನನ್ನ ಮಾತು ಅಂದ್ರೆ ಅಷ್ಟಕ್ಕಷ್ಟೇ, ಮೂರನೆಯವರು ಹೇಳಿದಾಗಲೇ ನೀನು ನಂಬೋದು ಅಂದಳು. ಸೋಮಿ ಮತ್ತೆ ಒಳಗೆ ಹೋದ ಮೇಲೆ ಈಗ ನಮ್ಮಪ್ಪನ ಮನೆ ಗಂಟು ಏನು ಹೋಯಿತು. ವಾಸು ಹೇಳಿದ ಹಾಗೆ ಸೋಮಿ ಹೇಳಿದ ಹಾಗೆ ಕೇಳ್ಕೊಂಡು ನಾನೇ ಈ ಮನೇಲಿ ಕಸವಾಗದ ಹಾಗೆ ಜಾಣನಂತೆ ಬದುಕೋದು ಬಹಳ ಮುಖ್ಯ ಅಂದುಕೊಂಡು ಅಡುಗೆ ಮನೆ ಕಡೆ ಹೋಗುತ್ತಾ ಬೆನ್ನು ಸವರಿಕೊಂಡು 'ಸೋಮಿ ಇವತ್ಯಾಕೋ ನಿನ್ನ ಕೈನ ಮಸಾಲಾ ಟೀ ಕುಡೀಬೇಕು ಅನಿಸ್ತಿದೆ ಕಣೆ. ನಿನ್ನಷ್ಟು ಚೆನ್ನಾಗಿ ಇನ್ಯಾರೂ ಮಸಾಲೆ ಟೀ ಮಾಡೋರ್ನ ನಾನು ಕಂಡಿಲ್ಲ' ಅಂದ.



ಸೋಮಿ ಕೊರಳು ಕೊಂಕಿಸಿ 'ಹೋಗಿ ಅಲ್ಲಿ ಡ್ರೈ ಕಸ, ವೆಟ್ ಕಸ ಎರಡೂ ಡಬ್ಬಗಳನ್ನು ಇಟ್ಟಿದ್ದೀನಿ. ಅವುಗಳನ್ನು ತಗೊಂಡು ಹೋಗಿ ಮೂಲೆಲಿ ಕಾರ್ಪೊರೇಷನ್ನಿನವರು ಇಟ್ಟಿರುವ ಬಾಕ್ಸ್‌ಗಳಿಗೆ ಹಾಕಿ ಬನ್ನಿ' ಅಂದಳು. ಕಸ ವಿಲೇವಾರಿ ಇಲ್ಲದೇ ಟೀ ಇಲ್ಲ. ಕಸ ವಿಲೇವಾರಿ ಮಾಡಲ್ಲ ಅಂದ್ರೆ ನಾನೇ ವಿಲೇವಾರಿ ಆಗಿಹೋಗ್ತೀನೊ ಏನೋ ಅಂದ್ಕೊಂಡು ಸೋಮು ಕಸದ ಡಬ್ಬಗಳನ್ನು ತಗೊಂಡು ಹೊರಟ.

ಪ್ರತಿಕ್ರಿಯಿಸಿ: **feedback@sudha.co.in**